4. ಎ.ಸಿ.ಸಿ. ಬಾಬ್‌ಕಾಕ್‌ನ ಜನರಲ್ ವರ್ಕರ್ಸ್ ಯೂನಿಯನ್, ಶಹಬಾದ್, ಇವರಿಂದ ಮುಷ್ಕರದ ಬಗ್ಗೆ

ಶ್ರೀ ಕೆ. ಬಿ. ಶಾನಪ್ಪ.—ಅಧ್ಯಕ್ಷರೆ, ಎ.ಸಿ.ಸಿ. ಬಾಬ್‌ಕಾಕ್ ಜನರಲ್ ವರ್ಕರ್ಸ್ ಯೂನಿಯನ್, ಶಹಬಾದ್‌ರವರು ಮುಷ್ಕರವನ್ನು ಮಾಡುತ್ತಿರುವ ಬಗ್ಗೆ ಮಾನ್ಯ ಕಾರ್ಮಿಕ ಮಂತ್ರಿಗಳವರ ಗಮನವನ್ನು ಸೆಳೆಯಲು ಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಎ.ಸಿ.ಸಿ. ಬಾಬ್‌ಕಾಕ್ ಜನರಲ್ ವರ್ಕರ್ಸ್ ಯೂನಿಯನ್, ಶಹಬಾದ್ ಇವರು ದಿನಾಂಕ ೨೩-೭-೬೫ರಂದು ತಮ್ಮ ಬೇಡಿಕೆಗಳ ಬಗ್ಗೆ ಎ.ಸಿ.ಸಿ. ಬಾಬ್‌ಕಾಕ್ ಲಿಮಿಟೆಡ್, ಶಹಾಬಾದ್ ಆಡಳಿತವರ್ಗದವರ ಮುಂದೆ ಇಟ್ಟರು. ಈ ಬಗ್ಗೆ ಕಾರ್ಮಿಕ ಇಲಾಖೆಯವನ್ನು ಮಧ್ಯೆ ಪ್ರವೇಶಿಸುವಂತೆ ಸಹ ಕೇಳಿತು. ಗುಲ್ಬರ್ಗಾದ ಉಪ ಕಾರ್ಮಿಕ ಆಯುಕ್ತರು ಕೆಲವು ಜಂಟಿ ಸಭೆಗಳನ್ನು ನಡೆಸಿ ವಿಷಯದ ಬಗ್ಗೆ ಎರಡೂ ಪಕ್ಷಗಳೊಂದಿಗೆ ಚರ್ಚೆ ನಡೆಸಿದರು. ದಿನಾಂಕ ೨೬-೪-೬೬ರಂದು ಈ ಬೇಡಿಕೆಗಳನ್ನು ಔದ್ಯಮಿಕ ವಿವಾದ ಎಂದು ಪರಿಗಣಿಸಿ ಸಂಧಾನಕ್ಕೆ ತೆಗೆದುಕೊಳ್ಳಲಾಯಿತು.

ತಂಟ್ಟಿಭತ್ಯದ ವಿಷಯದಲ್ಲಿ ಮಧ್ಯಂತರ ಒಪ್ಪಂದ ದಿನಾಂಕ ೨೩-೫-೬೬ರಂದು ಆಗಿ ಉಳಿದ ಬೇಡಿಕೆಗಳ ಬಗ್ಗೆ ಎರಡು ಪಕ್ಷಗಳವರು ತಮ್ಮತಮ್ಮಲ್ಲಿ ವಿಚಾರ ವಿನಿಮಯ ಮಾಡಲು ಸಮಯ ಕೇಳಿದರು. ಆದುದರಿಂದ ಸಂಧಾನ ಸಭೆಯನ್ನು ಮುಂದೂಡಲಾಯಿತು. ಅನಂತರ ಅನೇಕ ದಿನಗಳ ತರಿಗೆ ಯಾವುದೇ ಬೆಳವಣಿಗೆ ತಿಳಿಯಬಾರದ ಕಾರಣ ಪುನಃ ಸಂಧಾನ ಸಭೆಗಳನ್ನು ನಿಗದಿ ಮಾಡಲಾಯಿತು. ಈ ಮಧ್ಯೆ ದಿನಾಂಕ ೧೭-೮-೬೬ರಂದು ಕಾರ್ಮಿಕ ಸಂಘದವರು ಒಂದು ಮುಷ್ಕರ ತಿಳುವಳಿಕೆ ಪತ್ರವನ್ನು ಕೊಟ್ಟು ದಿನಾಂಕ ೧೯-೯-೬೬ರಿಂದ ಮುಷ್ಕರ ಹೂಡಲು ನಿರ್ಧರಿಸಿದ್ದೇವೆ ಎಂದು ಹೇಳಿದ್ದಾರೆ. ದಿನಾಂಕ ೧೯-೮-೬೬ರಂದು ಸಂಧಾನ ಪ್ರಯತ್ನ ಮುಂದುವರೆದು ಕೆಲವೊಂದು ಸಲಹೆಗಳನ್ನು ಸಂಧಾನಾಧಿಕಾರಿಗಳು ಕೊಟ್ಟಿದ್ದಾರೆ. ಮುಂದಿನ ಸಂಧಾನ ಸಭೆಯು ದಿನಾಂಕ ೨೯-೮-೬೬ರಂದು ನಡೆಯಲು ನಿಗದಿ ಮಾಡಲಾಗಿದೆ.

ಸಂಧಾನ ಸಭೆಯು ನಡೆಯುತ್ತಿರುವ ಸಮಯದಲ್ಲಿ ಮುಷ್ಕರ ಹೂಡಲು ನಿರ್ಧರಿಸುವುದು ಅಷ್ಟು ಸೂಕ್ತವಲ್ಲ, ವಿಷಯದ ಬಗ್ಗೆ ಎರಡು ಪಕ್ಷಗಳಲ್ಲಿ ಮಧ್ಯೆ ಒಪ್ಪಂದ ಏರ್ಪಡಿಸಲು, ಎಲ್ಲಾ ಪ್ರಯತ್ನಗಳನ್ನು ನಡೆಸಲಾಗುತ್ತಿದೆ ಆದುದರಿಂದ ಕೆಲಸಗಾರರು ತಮ್ಮ ಮುಷ್ಕರ ತಿಳುವಳಿಕೆಯನ್ನು ಹಿಂದಕ್ಕೆ ಪಡೆದು ಸಂಧಾನ ಪ್ರಯತ್ನಗಳು ಶಾಂತಿಯುತವಾತಾವರಣದಲ್ಲಿ ನಡೆಯಲು ಅನುವುಮಾಡಿಕೊಡಲು, ಕ್ರಮಗಳನ್ನು ಕೈಗೊಳ್ಳುವುದು ಸೂಕ್ತ.

ಮುಷ್ಕರ ಮಾಡತಕ್ಕಂತಹವ್ದನ್ನು ಕೈಬಿಡಿ ಎಂದು ನಾನೂ ಕೂಡ ಅವರಲ್ಲಿ ಮನವಿ ಮಾಡುತ್ತಿದ್ದೇನೆ. ೨೯ನೇ ತಾರೀಖು ಅವರ ಜೊತೆಯಲ್ಲಿ ಮಾತುಕತೆ ನಡೆಯುತ್ತದೆ. ಆ ಒಂದು ಮಾತುಕತೆಯಲ್ಲಿ ಏನೂ ಆಗದಿದ್ದರೆ, ಮುಂದೆ ಅವಶ್ಯಕ ಬಿದ್ದರೆ ಅವರೆಲ್ಲರನ್ನೂ ಬೆಂಗಳೂರಿಗೆ ಕರೆಸುತ್ತೇನೆ. ಆ ಸಮಯದಲ್ಲಿ ನಿಮ್ಮನ್ನು ಕರೆಸಿ ಸಂಧಾನ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದ್ದರಿಂದ ಈ ಒಂದು ಮುಷ್ಕರವನ್ನು ಕೈಬಿಡುವುದು ಒಳ್ಳೆಯದು.

ಶ್ರೀ ಕೆ. ಬಿ ಶಾನಪ್ಪ. —ಇದು ಎ.ಸಿ.ಸಿ.ಯವರು ನಡೆಸತಕ್ಕಂತಹ ಎ.ಬಿ.ಸಿ. ಕಂಪನಿ. ೧೯೬೪ರಲ್ಲೂ ಕೂಡ ಹೀಗೆ ಆಯಿತು. ೭ ದಿವಸಗಳ ಕಾಲ ಪ್ಲೈಕ್ ಆಯಿತು. ಕೊನೆಗೆ ಲಾಠಿ ಚಾರ್ಜ್ ಎಲ್ಲ ನಡೆದು ಬಹಳ ದೊಡ್ಡ ಗಲಾಟೆಯೇ ಆಯಿತು. ಇವರು ಇಂತಹ ಶಿಸ್ತಿಲ್ಲದ ಕಾರ್ಯಾನಿಗಳನ್ನು ನಡೆಸುತ್ತಿದ್ದಾರೆ ಇವರು ಸಾಮಾನ್ಯವಾಗಿ ಜಾಗೃತರಾಗಿರತಕ್ಕ ಪರ್ಸ. ಮುಷ್ಕರವನ್ನು ಬಿಟ್ಟು ಮಾತುಕತೆಗೆ ಒಂದು ಕುಳಿತ ಕೊಂದು ಪರಸ್ಪರ ಹೊಂದಾಣಿಕೆ ಏನಾದರೂ ಒಂದು ಕೀರ್ಮಾನಕ್ಕೆ ಬರಬಹುದು ಎನ್ನುವ ದೃಷ್ಟಿಕೋನವನು ನಾನು ಒತ್ತುತ್ತೇನೆ. ದುರಾದೃಷ್ಟವಶಾತ್ ಏನಾಗಿದೆ ಎಂದರೆ, ಕಳೆದ ಒಂದೂವರೆ ವರ್ಷದಲ್ಲೇ ವೇಜ್ ರಿವೈಜ್ ಆಗಬೇಕಾಗಿದ್ದುದು ಪೆಂಡಿಂಗ್ ನಲ್ಲಿದೆ. ೧೯೬೫-೬೫ನೇ ಸಾಲಿನಲ್ಲಿ ೧೯೬೫ರ ಕೊನೆಯಲ್ಲೇ ಇದು ಆಗಬೇಕಾಗಿತ್ತು. ಯೂನಿಯನ್‌ನವರ ಜೊತೆಗೆ ಬಲ್ಲಿಯ ಮ್ಯಾನೇಜ್‌ಮೆಂಟ್‌ನವರು ಕಳೆದ ಒಂದೂವರೆ ವರ್ಷದಿಂದ ಇದೇ ಮಾತನ್ನು ಹೇಳುತ್ತಲೇ ಬಂದಿದ್ದಾರೆ, ಯೂನಿಯನ್‌ನವರು ಇದನ್ನು ಕೇಳಿಕೊಂಡೇ ಬರುತ್ತಾ ಇದ್ದಾರೆ. ಇಷ್ಟಾದರೂ, ವೇಜ್ ರಿವೈಸ್ ಮಾಡುವುದಕ್ಕೆ ಮ್ಯಾನೇಜ್‌ಮೆಂಟ್‌ನವರು ತಯಾರಾಗಿಲ್ಲ. ಆದಕ್ಕಾಗಿ

ಈ ವಿಷಯವನ್ನು ಬಹಳ ಗಂಭೀರವಾದುದು ಅಂತ ತಾವು ತಿಳಿದುಕೊಳ್ಳಬೇಕು. ಎರಡನೆಯದಾಗಿ ಇದನ್ನು ಬಗೆಹರಿಸದಿದ್ದರೆ ಕಾನೂನು ಮತ್ತು ಶಾಂತಿ ಪಾಲನೆಯು ಪ್ರಶ್ನೆ ಬರುತ್ತದೆ. ಅದನ್ನು ಪುನಃ ವಾಪಸ್ಸು ತರುವುದಕ್ಕೆ ನಾವು ನೀವೂ ಇಬ್ಬರೂ ಸೇರಿ ಪುನಃ ಪ್ರಯತ್ನ ಮಾಡಬೇಕಾಗುತ್ತದೆ ಅಲ್ಲಿರುವಂತಹ ಕಾರ್ಮಿಕ ವರ್ಗ ಇಲ್ಲಿಯವರೆಗೂ ಬಹಳ ಶಾಂತ ರೀತಿಯಿಂದ ವರ್ತನೆ ಮಾಡಿಕೊಂಡು ಬಂದಿದ್ದಾರೆ. ಅದೇ ಪ್ರಕಾರ ಮ್ಯಾನೇಜ್‌ಮೆಂಟ್‌ನವರೇನು ಸಣ್ಣ ಕಂಪನಿಯವರಲ್ಲ. ಅವರು ಎಂಲ್ಟಿ ಮಿಲಿಯನೇರ್ಸ್ ಕಾರ್ಮಿಕರಿಗೆ ನ್ಯಾಯವಾಗಿ ಸಿಕ್ಕಬೇಕಾದ ಸವಲತ್ತನ್ನು ಕೊಡಿಸುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕು. ತಾವು ಈ ಬಗ್ಗೆ ಪ್ರಯತ್ನ ಮಾಡಿ, ಸಮಸ್ಯೆಯನ್ನು ಬಗೆಹರಿಸುತ್ತೀರಿ ಎಂಬ ವಿಶ್ವಾಸ ನಮಗಿದೆ. ದಯಮಾಡಿ ಅಲ್ಲಿ ಮುಷ್ಕರ ಆಗದ ಹಾಗೆ, ಮ್ಯಾನೇಜ್‌ಮೆಂಟ್‌ನವರ ಮೇಲೆ ಪ್ರೆಷರ್ ಹಾಕಿ you ask both the parties to come over to Bangalore on 1st September 1986 if they fail in their talks on 29-8-1986 and see that the strike doesn't take place. If this is not done the people will be with the work-force.

SRI K. B. SHANAPPA.—It is not done, the entire working class will be with the ACC workers.

ಶ್ರೀ ಎಸ್.ಆರ್. ಬೊಮ್ಮಾಯಿ.—೨೯ ರಂದು ಸಂಧಾನ ನಡೆಯುತ್ತಿದೆ. ನಾವು ಯಾವ ರೀತಿ ಮ್ಯಾನೇಜ್‌ಮೆಂಟ್ ಮೇಲೆ ಒತ್ತಾಯ ತರಬೇಕು ಆ ರೀತಿ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಒಂದನೇ ತಾರೀಖು ಮುಷ್ಕರ ಮಾಡ ತಕ್ಕ ವಿಚಾರವನ್ನು ಕೈಬಿಡಬೇಕು. ೨೯ ರಂದು ಮಾತುಕತೆ ನಡೆದು ಮತ್ತೆ ಮುಂದುವರೆಯಬಹುದು ಒಂದು ವೇಳೆ ಮಾತುಕತೆ ವಿಫಲವಾದರೆ ಬೆಂಗಳೂರಿಗೆ ಕರೆಸತಕ್ಕ ಭರವಸೆ ಕೊಡುತ್ತಿದ್ದೇನೆ. ಹೈಯರ್ ಲೆವಲ್‌ನಲ್ಲಿ ತಮ್ಮನ್ನು ಕರೆದು ಇತ್ಯರ್ಥ ಮಾಡತಕ್ಕ ಭರವಸೆ ಕೊಡುತ್ತಿದ್ದೇನೆ. ಮುಷ್ಕರ ಮಾಡತಕ್ಕ ವಿಚಾರದಲ್ಲಿ ಕೈ ತಪ್ಪಿ ಹೋಗುತ್ತದೆಂದು ಹೇಳುತ್ತಿದ್ದೇನೆ, ಆ ರೀತಿ ಆಗಬಾರದು. ಯಾವುದೇ ಒಂದು ಮುಷ್ಕರವನ್ನು ಕೊನೆ ಕಾಲದಲ್ಲಿ ಮಾಡಿದರೂ ಅದರಿಂದ ಕಾನೂನಿನ ಅವ್ಯವಸ್ಥೆ ಆಗಬಾರದೆಂದು ಹೇಳುತ್ತೇನೆ. ಕಾನೂನು ಅವ್ಯವಸ್ಥೆ ಆದಾಗ ಎಲ್ಲರಿಗೂ ತೊಂದರೆಯಾಗುತ್ತದೆ. ಆ ವಿಚಾರವನ್ನು ಇಲ್ಲಿ ಹೇಳುವುದಿಲ್ಲ ೨೯ರಂದು ಸಂಧಾನಕ್ಕೆ ಬರುವುದರ ಬಗ್ಗೆ, ಬೇಡಿಕೆಗಳ ಬಗ್ಗೆ. ಹಾಗೂ ಸರಿಯಾದ ರೀತಿಯಲ್ಲಿ ಇತ್ಯರ್ಥ ಮಾಡುವುದರ ಬಗ್ಗೆ ಭರವಸೆ ಕೊಡುತ್ತೇನೆ. ದಯವಿಟ್ಟು ಮುಷ್ಕರದ ವಿಚಾರವನ್ನು ಬಿಡಿ. ಮಾತುಕತೆ ವಿಫಲವಾದಾಗ ಕೊನೇ ಅಸ್ತ್ರ ಇದ್ದೇ ಇದೆ. ಸರ್ಕಾರ ಒತ್ತಾಯ ಮಾಡುವುದು ಮಾಡಿಯೇ ಮಾಡುತ್ತದೆ.

ಶ್ರೀ ಕೆ. ಬಿ. ಶಾಣಪ್ಪ —ಒಂದನೇ ತಾರೀಖಿಗೆ ಕರೆಸಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದನೇ ತಾರೀಖಿಗೆ.....

SRI K.B. SHANAPPA.—They had taken the ballot paper decision and 98% of the workmen have voted for strike. They have given 21 days notice.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಂಧಾನ ಮಾಡುವುದಕ್ಕೆ ನಮಗೆ ಅವಕಾಶ ಮಾಡಿಕೊಡಿ. ಸಂಧಾನ ವಿಫಲವಾದಾಗ ಕೊನೇ ಅಸ್ತ್ರವನ್ನು ಉಪಯೋಗ ಮಾಡಿ ಎಂದು ಕಾರ್ಮಿಕರಿಗೆ ತಮ್ಮ ಮೂಲಕ ಮತ್ತು ಈ ಮನೆಯ ಮೂಲಕ ಪ್ರಾರ್ಥಿಸುತ್ತೇನೆ. ಮುಷ್ಕರವನ್ನು ಮುಂದೆ ಹಾಕಿ ಮಾತುಕತೆಗೆ ತಾವು ಹೋಗಿ, ಅಲ್ಲಿ ವಿಫಲವಾದರೆ ಇಲ್ಲಿ ಚರ್ಚಿಸೋಣ.